ವಿಶ್ವಬ್ಯಾಂಕಿಗೆ ಇನ್ನೂ ಇದನ್ನು ಪ್ರೊಪೋಜ್ ಮಾಡಿರತಕ್ಕಂಥಾದ್ದು ಅದಕ್ಕೂ ಕೂಡ ವಿಶ್ವಬ್ಯಾಂಕಿನ ಅನುಮತಿ ಸಿಕ್ಕಿದ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ.

ವಿಷಯ : ವಿದ್ಯುತ್ ಉತ್ಪಾದನೆಗೆ ಖಾಸಗಿ ಬಂಡವಾಳ

ಚುಕ್ಕೆ ಗುರುತಿನ ಪ್ರಶ್ನೆಯ ಸಂಖ್ಯೆ 151(521)

ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಗೋಸ್ಕರ ಖಾಸಗಿ ವಲಯದಿಂದ ಇದುವರೆವಿಗೂ ಮಾಡಿರುವ ಬಂಡವಾಳ ಎಷ್ಟು? ವಿವರಗಳನ್ನೊದಗಿಸುವುದು.

(ಆ) ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರಕಾರ ವಿದ್ಯುತ್ ಉತ್ಪಾದನೆಗೆ ತೊಡಗಿಸಿರುವ ಬಂಡವಾಳದ ಮೊತ್ತ ಎಷ್ಟು?

ಶ್ರೀ ಎಸ್.ಎಂ.ಕೃಷ್ಣ (ಉಪ ಮುಖ್ಯಮಂತ್ರಿಗಳು)

(ಅ) ತುಂಗಭದ್ರಾ ಎಡದಂಡೆ ಕಾಲುವೆಯ ಶಿವಪುರ ಜಲವಿದ್ಯುತ್ ಯೋಜನೆಯನ್ನು ಕಾರ್ಯಗತಗೊಳಿಸಲು ಮೆಃ ಭರೂಕಾ ಪವರ್ ಕಾರ್ಪೊರೇಷನ್ ಲಿ. ಇವರು 30.6 ಕೋಟಿ ರೂ.ಗಳ ಬಂಡವಾಳ ಹೂಡಿದ್ದಾರೆ. ತಲಾ 9.00 ಮೆ.ವಾ. ಸಾಮರ್ಥ್ಯದ 2 ಘಟಕಗಳ ಈ ಯೋಜನೆ ನವೆಂಬರ್-ಡಿಸೆಂಬರ್ 1992ರಲ್ಲಿ ಕಾರ್ಯಾರಂಭ ಮಾಡಿತು.

(ಆ) ಕಳೆದ ಮೂರು ವರ್ಷಗಳಲ್ಲಿ ವಿದ್ಯುತ್ ಉತ್ಪಾದನೆಗೆ ತೊಡಗಿಸಿರುವ ಬಂಡವಾಳ ಈ ಕೆಳಕಂಡಂತಿದೆ.

(ಕೋಟಿ ರೂ.ಗಳು)

1991-92	...	195.24
1992-93	...	339.80
1993-94	...	312.45

ಶ್ರೀ ಪಿ.ಜಿ. ಆರ್ ಸಿಂಧ್ಯ : ಮಾನ್ಯ ಅಧ್ಯಕ್ಷರೇ ನಾನು ಉಪ ಮುಖ್ಯಮಂತ್ರಿಗಳಲ್ಲಿ ಕೇಳುವುದು ಪ್ರವೇಟ್ ಸೆಕ್ಟಾರ್‌ನಿಂದ ಇದುವರೆಗೂ ಎಷ್ಟು ಬಂಡವಾಳ ವಿದ್ಯುತ್ ಉತ್ಪಾದನೆಗಾಗಿ ಹೂಡಲಾಗಿದೆ? ಕಳೆದ 2-3 ವರ್ಷಗಳಿಂದ ಗೌರ್ನಮೆಂಟ್ ಆಫ್ ಇಂಡಿಯಾದವರ ಜೊತೆಯಲ್ಲಿ ನಮ್ಮ ಮಾನ್ಯ ಉಪ ಮುಖ್ಯಮಂತ್ರಿಗಳು ಬೇಕಾದಷ್ಟು ಪ್ರಯತ್ನ ಮಾಡಿದ್ದಾರೆ. ಇದರಿಂದ ಎಷ್ಟು ನಿರೀಕ್ಷೆ ಇದೆ? ಹೊರಗಡೆಯಿಂದ ಪ್ರವೇಟ್ ಸೆಕ್ಟಾರ್‌ನಲ್ಲಿ ಎಷ್ಟು ಹಣ ಬರಬಹುದು ಎನ್ನುವ ನಿರೀಕ್ಷೆ ಇದೆ. ತಾವು ಏನು ಕಳೆದ 2-3 ವರ್ಷಗಳಿಂದ ಬಂಡವಾಳವನ್ನು ತೊಡಗಿಸಿದ್ದೀರಾ ಅದರಲ್ಲಿ ನಾವು ಎಷ್ಟು ವಿದ್ಯುತ್‌ಚ್ಛಕ್ತಿಯನ್ನು ಕಳೆದ 3 ವರ್ಷಗಳಿಂದ ಮಾಡಿದ್ದೇವೆ ಆ ಅಂಕಿಅಂಶಗಳನ್ನು ಕೊಡಲಿಕ್ಕೆ

ಸಾಧ್ಯವೇ?

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರದ ಪ್ರಚಲಿತ ನೀತಿಯ ಚೌಕಟ್ಟಿನಲ್ಲಿ ನಾವು ಖಾಸಗಿ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಯನ್ನು ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಮುಖ್ಯವಾಗಿ ಒಂದು ಸಾವಿರ ಮೆಗಾವ್ಯಾಟ್ ಸಾಮರ್ಥ್ಯದ ಕೊಜೆಂಟ್ರಿಕ್ಸ್ ಸಂಸ್ಥೆ ಮಂಗಳೂರಿನಲ್ಲಿ ಖಾಸಗಿ ವಲಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದಕ್ಕೆ ಕೇಂದ್ರ ಸರ್ಕಾರ ರಚನೆ ಮಾಡಿರತಕ್ಕಂಥ ಹೈ ಪವರ್ ಬೋರ್ಡ್ ಪರವಾನಿಗೆ ಕೊಟ್ಟಿದೆ. ಅದರ ಪರವಾನಿಗೆ ಬಂದು ಬಹಳ ತಿಂಗಳುಗಳೇ ಆಯಿತು. ಆದರೆ ಹೊಸದಾಗಿ ನಾವು ನಮ್ಮ ವಿದ್ಯುಚ್ಛಕ್ತಿ ಮಂಡಲಿಯವರ ಜೊತೆಯಲ್ಲಿ ಪವರ್ ಪರ್ಚೇಸ್ ಅಗ್ರಿಮೆಂಟ್ ಮಾಡಿಕೊಳ್ಳಬೇಕಾಗಿದೆ. ಮತ್ತು ಅದು ಜಟಿಲವಾದುದು ಹೌದು. ಮೊಟ್ಟಮೊದಲನೆಯದಾಗಿ ಅದನ್ನು ನಾವು ಮಾಡುತ್ತಿದ್ದೇವೆ. The first Power Purchase Agreement of such a large volume ಆದ್ದರಿಂದ ಆ ಕೊಜೆಂರ್ಟಿಕ್ಸ್ ಸಂಸ್ಥೆಯ ಉನ್ನತ ಮಟ್ಟದ ನಿಯೋಗವೊಂದು ಮೊನ್ನೆ ಬಂದಿತ್ತು ಅದು ಅಂತಿಮ ಘಟ್ಟದಲ್ಲಿದೆ. ಇತ್ತೀಚೆಗೆ ಎಚ್.ಕೆ ಎಂಬ ಮತ್ತೊಂದು ಸಂಸ್ಥೆಗೆ 500 ಮೆಗಾವಾಟ್ಸ್ ಸಾಮರ್ಥ್ಯದ ಖಾಸಗೀ ಬಂಡವಾಳಕ್ಕೆ ಕೇಂದ್ರಸರ್ಕಾರದ ಅನುಮತಿ ಸಿಕ್ಕಿದೆ. ಜೊತೆಗೆ ಇನ್ನೂ ಮೂರ್ನಾಲ್ಕು ಸಂಸ್ಥೆಗಳ ಜೊತೆಯಲ್ಲಿ ನಾವು ಮೆಮೊರಾಂಡಂ ಆಫ್ ಅಂಡರ್‌ಸ್ಟ್ಯಾಂಡಿಂಗ್ ಮಾಡಿಕೊಂಡಿದ್ದೇವೆ. ಒಂದು, ಆಲಮಟ್ಟಿ ಹಾಗೂ ತಮನಕಲ್ ಜಲವಿದ್ಯುತ್ ಯೋಜನೆ – ಟ್ಯಾಪ್ಕೊ ಎಂಬ ಸಂಸ್ಥೆ ಜೊತೆಯಲ್ಲಿ 600 ಮೆಗಾವಾಟನ್ನು ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳ ಮಧ್ಯೆ ಮಾಡಬೇಕೆಂದು ಒಪ್ಪಂದ ಮಾಡಿಕೊಂಡಿದ್ದೇವೆ. ಹಾಗೆಯೇ ರಾಯಚೂರಿನಲ್ಲಿ ಈಗ ನಾಲ್ಕು ಘಟಕಗಳನ್ನು ಕರ್ನಾಟಕ ಪವರ್ ಕಾರ್ಪೊರೇಷನ್‌ನವರು ಮಾಡಿದ್ದಾರೆ. 4ನೇ ಘಟಕವನ್ನು ಈ ವರ್ಷದ ಡಿಸೆಂಬರ್‌ನಲ್ಲಿ ಅದರ 210 ಮೆಗಾವ್ಯಾಟ್ ಸಾಮರ್ಥ್ಯವನ್ನು ನಮ್ಮ ಗ್ರಿಡ್‌ಗೆ ಜೋಡಿಸುತ್ತಿದ್ದೇವೆ. ಈಗ ಅಲ್ಲಿ ಸಿಂಕ್ರನೈಜೇಶನ್ ಕಾರ್ಯ ನಡೆಯುತ್ತಿದೆ. ಅಲ್ಲಿ ಜೊತೆಗೆ 5 ಮತ್ತು 6 ಘಟಕಗಳ ಜೊತೆಗೆ ಒಂದು ವಿದೇಶೀ ಕಂಪನಿ ಜೊತೆ ನಾವು ಒಪ್ಪಂದ ಮಾಡಿಕೊಳ್ಳುತ್ತಿದ್ದೇವೆ. ಆ ಒಪ್ಪಂದ ಕರ್ನಾಟಕ ಪವರ್ ಕಾಪೊರೇಷನ್ ಮುಂದೆ ಇದೆ. ಇದೆಲ್ಲಾ ಲೆಕ್ಕಹಾಕಿದರೆ ಸುಮಾರು 3357 ಮೆಗಾವಾಟ್ ಸಾಮರ್ಥ್ಯದ ವಿದ್ಯುತ್ತನ್ನು ಮುಂದಿನ ಕೆಲವು ವರ್ಷಗಳಲ್ಲಿ ಉತ್ಪಾದನೆ ಮಾಡಲಿಕ್ಕೆ ಒಂದು ಭದ್ರವಾದ ಬುನಾದಿ ನಾವು ಹಾಕುತ್ತಿದ್ದೇವೆ.

ಶ್ರೀ ಪಿ.ಜಿ.ಆರ್ ಸಿಂಧ್ಯ : ಭದ್ರವಾದ ಬುನಾದಿ ಹಾಕುತ್ತಿದ್ದೇವೆ ಮತ್ತೆ ಮೆಮೊರಾಂಡಂ ಆಫ್ ಅಂಡರ್‌ಸ್ಟ್ಯಾಂಡಿಂಗ್ ಬಂದಿದ್ದೇವೆಂದು ಕಳೆದ ನಾಲ್ಕು ವರ್ಷಗಳಿಂದ ಹೇಳಿಕೊಂಡೆ ಬಂದಿದ್ದೀರಿ. ಅಕ್ಚುಯಲಾಗಿ ಪ್ರೈವೇಟ್ ಸೆಕ್ಟಾರಿನಿಂದ ಇನ್‌ವೆಸ್ಟ್ಮಾಗಿರುವುದು ಎಷ್ಟು? ಅದು 30 ಕೋಟಿ ಅಷ್ಟೆಯೋ ಅಥವಾ ಈ ಅರ್ಥವ್ಯವಸ್ಥೆಯಲ್ಲಿ ಯಾರಾದರೂ ಇನ್‌ವೆಸ್ಟ್‌ಮೆಂಟ್‌ಗೆ ಒಪ್ಪಿಕೊಂಡಿದ್ದಾರೋ ಮತ್ತು ಎಷ್ಟು ಕೋಟಿ ಇನ್‌ವೆಸ್ಟ್ ಮಾಡುತ್ತಿದ್ದಾರೆ. 3500 ಮೆಗಾವಾಟ್‌ವಷ್ಟು ಹೆಚ್ಚು ವಿದ್ಯುತ್ ಉತ್ಪಾದಿಸಲು ಎಂಒಯು ಬಂದಿದ್ದೇವೆ ಎನ್ನುತ್ತಾರೆ ಯಾವಾಗ ಇದಾಗುವುದು? ಬಂಗಾರಪ್ಪನವರು

ಮುಖ್ಯಮಂತ್ರಿಗಳಿದ್ದಾಗ ನಾನು ವಿದೇಶಕ್ಕೆ ಹೋಗಿದ್ದೆ, ನಾಲ್ಕೈದು ಸಾವಿರ ಮೆಗಾವಾಟ್‌ಗೆ ಎಂಒಯುಗೆ ಒಂದು ನಾನೂ 40 ಸಾವಿರ ಕೋಟಿ ತೆಗೆದುಕೊಂಡು ಬರುತ್ತೇನೆ ಎಂದರು. ವೀರಪ್ಪಮೊಯಿಲಿಯವರೂ ಅದೇ ಹೇಳುತ್ತಿದ್ದಾರೆ. ಆ ಕೋಟಿ ರೂಗಳಿಗೆ ಬೆಲೆಯೇ ಇಲ್ಲ. ಖಚಿತವಾಗಿ ಎಷ್ಟು ಬರುತ್ತದೆಂದು ತಾವು ತಿಳಿಸಲು ಸಾಧ್ಯವೇ?

ಶ್ರೀ ಎಸ್.ಎಂ.ಕೃಷ್ಣ : ನಾವು ಸಹಿ ಹಾಕಿರತಕ್ಕ ಒಪ್ಪಂದಗಳಿಲ್ಲವೂ ಜಾರಿಗೆ ಬಂದಿದ್ದೇ ಆದರೆ ಕರ್ನಾಟಕದಲ್ಲಿ ಹಿಂದೆಂದೂ ನಡೆಯದಿರದ ವಿದ್ಯುತ್‌ಕ್ರಾಂತಿ ನಡೆದುಹೋಗುತ್ತದೆ. ಅದಕ್ಕೇ ನಾವು ಇವತ್ತು ಅಸ್ತಿಭಾರ ಹಾಕುತ್ತಿದ್ದೇವೆ. ಒಂದು ಮೆಗಾವಾಟ್ ಉತ್ಪಾದನೆ ಮಾಡಬೇಕಾದರೆ 4 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಮಾನ್ಯ ಚಂದ್ರೇಗೌಡರು ಅಧ್ಯಕ್ಷರಾಗಿದ್ದ ಸಬ್ಜೆಕ್ಟ್ ಕಮಿಟಿಯವರು ಒಂದು ಅಮೂಲ್ಯ ವರದಿಯನ್ನು ಈ ಸದನದ ಮುಂದಿಟ್ಟಿದ್ದಾರೆ. ಅವರ ವರದಿಯಲ್ಲಿ ಈ ಅಂಶಗಳೆಲ್ಲವೂ ಕೂಡ ನಮೂದಾಗಿವೆ ಮತ್ತು ಶ್ಲಾಘನೆಗೂ ಕೂಡ ಒಳಗಾಗಿವೆ ಎಂಬುದನ್ನು ಅತ್ಯಂತ ನಮ್ರತೆಯಿಂದ ನಾನು ಸದನದಲ್ಲಿ ಹೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ನಾನು ಮಿನಿಘಟಕಗಳನ್ನು ಬಿಟ್ಟಿದ್ದೇನೆ, ನಮ್ಮ ಮಲ್ಟಿ ಫ್ಯೂಯಲ್ ಘಟಕಗಳನ್ನು ನಾನು ಇತ್ತೀಚೆಗೆ ಏನು ಅನೌನ್ಸ್ ಮಾಡಿದ್ದೇನೆ ಅವನ್ನು ಬಿಟ್ಟಿದ್ದೇನೆ. ದೊಡ್ಡ ಘಟಕಗಳನ್ನು ಮಾತ್ರ ನನ್ನ ಮನಸ್ಸಿನಲ್ಲಿಟ್ಟುಕೊಂಡು ಇಲ್ಲಿ ಹೇಳುತ್ತಿದ್ದೇನೆ. ಅಂದರೆ ಸ್ವಲ್ಪ ಟೈಂ ಬೇಕಾಗುತ್ತದೆ. ಆದರೆ ಕೆಲಸವನ್ನು ಪ್ರಾರಂಭ ಮಾಡಬೇಕು. ಬಹಳ ಉತ್ಸಾಹದಿಂದ ಬಂಡವಾಳ ಮಾಡುವುದಕ್ಕೆ ಹೊರದೇಶಗಳಿಂದ ಮತ್ತು ನಮ್ಮ ದೇಶದಲ್ಲಿರುವ ದೊಡ್ಡ ಬಿಜಿನೆಸ್‌ಹೌಸ್ ಕೂಡ ಇವತ್ತು ವಿದ್ಯುದುತ್ಪಾದನೆಗೆ ಅವರ ಬಂಡವಾಳ ಹೂಡಲಿಕ್ಕೆ ಕರ್ನಾಟಕದಲ್ಲಿ ಭೂಮಿಕೆ ಸಿದ್ಧವಾಗಿದೆ. ಎಂಬುದು ಪ್ರಕಟಿತವಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅತ್ಯಂತ ಮುಖ್ಯವಾದ ಒಂದೇ ಪ್ರಶ್ನೆ ಕೇಳುತ್ತೇನೆ ಉತ್ಪಾದನೆಗೆ ಖಾಸಗಿ ಸಂಸ್ಥೆಗಳು ಮತ್ತು ಸ್ವದೇಶವು ಎರಡೂ ಬಂದಿವೆ. ಆದರೆ ಟ್ರಾನ್ಸ್‌ಮಿಶನ್ ಮತ್ತು ಡಿಸ್ಟ್ರಿಬ್ಯೂಶನ್‌ಗೆ ಖಾಸಗಿ ಸಂಸ್ಥೆಗಳಿಂದ ಒಂದು ರೂಪಾಯಿನ ಬಂಡವಾಳ ಹಾಕುವುದಿಲ್ಲ. ಉತ್ಪಾದನೆ ಮಾಡುವ ವಿದ್ಯುತ್ತನ್ನು ರವಾನೆಮಾಡುವ ಮತ್ತು ಹಂಚುವ ಸಂಪೂರ್ಣ ಜವಾಬ್ದಾರಿ ವಿದ್ಯುತ್ ಇಲಾಖೆ, ಮಂಡಲಿಯದು. ಅದಕ್ಕೆ ಸುಮಾರು 18 ಸಾವಿರ ಕೋಟಿ ಬೇಕಾಗಬಹುದು, ಇಷ್ಟು ದೊಡ್ಡ ಪ್ರಮಾಣದ ವಿದ್ಯುತ್ ವಿತರಣೆಗೆ. ಆದ್ದರಿಂದ ವಿತರಣೆ ಕಾರ್ಯದಲ್ಲಿ ಖಾಸಗಿಯವರು ಬರೆದೆ ಬರೀ ಉತ್ಪಾದನೆಗೆ ಮಾತ್ರ ಬರುತ್ತಿದ್ದಾರೆ. ವಿತರಣೆ ವ್ಯವಸ್ಥೆಗೆ ನಮ್ಮ ಮಂಡಲಿಯನ್ನು ಸಬಲಗೊಳಿಸಲು ಸರ್ಕಾರ ಯಾವ ರೀತಿ ಪ್ರಯತ್ನಪಡುತ್ತದೆ.

ಶ್ರೀ ಎಸ್.ಎಂ ಕೃಷ್ಣ : ಮಾನ್ಯ ಸದಸ್ಯರು ಹೇಳಿರುವುದರಲ್ಲಿ ಬಹಳ ಅರ್ಥವಿದೆ. ಕೇವಲ ಕೆಇಬಿಯನ್ನೇ ನಾವು ವಿತರಣೆಗೋಸ್ಕರ ಆಶ್ರಯಿಸುವುದಾದರೆ ಬಹಳ ಕಠಿಣವಾದ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಆದ್ದರಿಂದ ಸರ್ಕಾರದ ಚಿಂತನೆ ಯಾವ ದಿಕ್ಕಿನಲ್ಲಿ ಸಾಗಿದೆ ಎಂದರೆ ವಿತರಣೆಗೂ ಕೂಡ ಖಾಸಗಿಯವರನ್ನು ಇನ್‌ವಾಲ್ವ್ ಮಾಡಬೇಕು, ಕೇಂದ್ರ ಸರ್ಕಾರದವರು ಅದಕ್ಕೆ ತಾತ್ವಿಕವಾಗಿ ಒಪ್ಪಿದ್ದಾರೆ. ವಿತರಣೆಗೆ ಸಹ ಖಾಸಗಿ ಬಂಡವಾಳದಾರರನ್ನು ಸೇರಿಸಿಕೊಂಡು

ಮಾಡಬೇಕೆಂಬುದು ನಮ್ಮ ಸದ್ಯದ ಚಿಂತನೆ.

ಶ್ರೀ ಸಿ. ಬೈರೇಗೌಡ : ಈ ಸದನ ಸಮಿತಿ ಜಲವಿದ್ಯುತ್ ಯೋಜನೆಗಳನ್ನು ಖಾಸಗಿಯವರಿಗೆ ಕೊಡಬಾರದೆಂಬ ಸಲಹೆ ಮಾಡಿದೆ. ಅದು ಸರ್ಕಾರದ ಗಮನದಲ್ಲಿದೆಯೆ? ಮತ್ತು ರಾಯಚೂರಿನ 1 ರಿಂದ 4ನೇ ಯೂನಿಟ್‌ಗಳನ್ನು ಕೆಪಿಸಿಯವರು ನಡೆಸುತ್ತಿದ್ದಾರೆ. 5-6 ಅನ್ನು ನೀವು ಖಾಸಗಿಯವರಿಗೆ ಕೊಟ್ಟರೆ ಅಲ್ಲ ಹೊಂದಾಣಿಕೆ ಯಾವ ರೀತಿ ಇರುತ್ತದೆ? ಒಂದೇ ಕೋಣೆಯಲ್ಲಿರುವ ಗಂಡ ಹೆಂಡತಿಯೇ ಅನೇಕ ಸಂದರ್ಭದಲ್ಲಿ ಜಗಳ ಆಡುತ್ತಾರೆ. ನೀವು ಇಬ್ಬರು ಮೂವರನ್ನು ತಂದು ಒಂದೇ ಕೋಣೆಗೆ ಹಾಕಿದರೆ ಪ್ರತಿ ದಿವಸ ಅಲ್ಲ ಜಗಳ ಬಿಡಿಸುವವರಾರು? ಯಾವ ರೀತಿ ಹೊಂದಾಣಿಕೆ ಇರುತ್ತದೆ? ಆದ್ದರಿಂದ 5-6 ನೇ ಯೂನಿಟನ್ನು ಖಾಸಗಿಯವರಿಗೆ ಕೊಡದೆ ಕೆಪಿಸಿಯವರ ಮೂಲಕವೇ ಮಾಡಿಸಲು ಪ್ರಯತ್ನ ಮಾಡಿತ್ತೀರಾ? ಮತ್ತು ಖಾಸಗಿಯವರಿಗೆ ಏನು ಸಮಲತ್ತು ಕೊಡುತ್ತಿದ್ದೀರಿ ಅದನ್ನು ಕೆಪಿಸಿಗೂ ಕೊಟ್ಟರೆ ಅವರಿಗೂ ಟಿಕ್ಕಿಕಲ್‌ನೊಹೌ ಇದೆ ಚೆನ್ನಾಗಿರುವ ಅಧಿಕಾರಿಗಳಿದ್ದು ಅವರೂ ಅರ್ಹತೆ ಹೊಂದಿದ್ದಾರೆ. ಇದರ ಬಗ್ಗೆ ಏನು ಹೇಳುತ್ತೀರಿ ಸ್ವಾಮಿ?

ಶ್ರೀ ಎಸ್.ಎಂ.ಕೃಷ್ಣ : ಈ ಖಾಸಗಿ ವಿಮಾನಗಳು ಹಾರಾಟ ಮಾಡುವುದಕ್ಕೆ ಶುರುವಾದಾಗಲೂ ಕೂಡ ಮಾನ್ಯ ಭೈರೇಗೌಡರು ಏನು ದ್ವಂದ್ವಗಳನ್ನು ವ್ಯಕ್ತಪಡಿಸಿದರು, ಅದೇ ದ್ವಂದ್ವಗಳು ಅಲ್ಲೂ ಇತ್ತು. ಕಾಮನ್ ಫೆಸಿಲಿಟೀಯನ್ನು ಈಸ್ಟ್‌ವೆಸ್ಟ್‌ನವರು ಹೇಗೆ ಉಪಯೋಗಿಸುತ್ತಾರೆ. ನಿಯಮದವರು ಹೇಗೆ ಉಪಯೋಗಿಸುತ್ತಾರೆ ಎಂದು ಈ ರೀತಿಯ ಸ್ಟಾರ್ಟಿಂಗ್ ಪ್ರಾಬಮ್ಸ್ ಏನಿವೆ ಅವನ್ನು ನಾವು ಬಗೆಹರಿಸಬಹುದು. ವಿದೇಶಿ ಕಂಪನಿಗಳ ಜೊತೆಗೆ ನಾವು ಮಾಡಿಕೊಂಡಿರುವ ಒಪ್ಪಂದಕ್ಕೆ ಒಂದು ಸ್ಯಾಂಕ್ಟಿಟಿ ಇರಬೇಕಾಗುತ್ತದೆ. ಇಲ್ಲದಿದ್ದರೆ ನಮ್ಮ ದೇಶದಲ್ಲಿ ಇವತ್ತು ಯಾವ ಪ್ರಮಾಣದಲ್ಲಿ ವಿದೇಶಿ ಬಂಡವಾಳ ಬರುತ್ತಿದೆಯೋ ಆ ಪ್ರಮಾಣಕ್ಕೆ ಅಪಘಾತವನ್ನು ಉಂಟುಮಾಡುವ ರಾಂಗ್ ಸಿಗ್ನಲ್ ಹಾಗೂ ಮೆಸೇಜ್ ಅನ್ನು ಕೊಡತಕ್ಕಂಥ ಯಾವ ಕಾರ್ಯವನ್ನು ಕೂಡ ನಾವು ಮಾಡಬಾರದೆಂದು ಭಾರತ ಸರ್ಕಾರ ನಮಗೆ ಕೊಟ್ಟಿರುವ ಒಂದು ಗೈಡ್‌ಲೈನ್. ಆ ಗೈಡ್‌ಲೈನ್ಸ್‌ನ ಚೌಕಟ್ಟಿನಲ್ಲಿ ನಾವು ಇದನ್ನು ಮಾಡುತ್ತೇವೆ.

ವಿಷಯ : ಮಹಾಂ ಉನ್ನತ ಮಟ್ಟದ ಸಮಿತಿಯ ವರದಿಯ ಅನುಷ್ಠಾನ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 152 (201)

ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ 28-4-94ರಂದು ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಮಹಾಂ ಉನ್ನತ ಪ್ರಾಧಿಕಾರದ ಸಭೆಯಲ್ಲಿ ಆದ ತೀರ್ಮಾನಗಳು ಸರ್ಕಾರಿ ಆದೇಶಗಳಾಗದೇ ಸಂತ್ರಸ್ತ ರೈತರಿಗೆ ಬಹಳಷ್ಟು ತೊಂದರೆಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮವೇನು?